# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/1338–2021
ಮಂಡನಾಧಿಕಾರಿಗಳ ಶಾಖೆ

ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 13–01–2022.
20

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ

**ವಿಷಯ: ಶ್ರೀಮತಿ ವಸಂತಗೀತಾ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮಲ್ಲದಗುಡ್ಡ ಗ್ರಾಮ ಪಂಚಾಯತಿ, ಮಸ್ಕಿ ತಾ: ರಾಯಚೂರು ಜಿಲ್ಲೆ,** – ಆದ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

-----

1. ಪೊಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ರಾಯಚೂರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ). ಇವರು ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸದರಿ ವರದಿಯಲ್ಲಿ **ಶ್ರೀಮತಿ ವಸಂತಗೀತಾ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮಲ್ಲದಗುಡ್ಡ ಗ್ರಾಮ ಪಂಚಾಯತಿ, ಮಸ್ಕಿ ತಾ: ರಾಯಚೂರು ಜಿಲ್ಲೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ದೂರುದಾರರಾದ **ಶ್ರೀ ಅಮರೇಶ ಬಿನ್ ಈರಪ್ಪ, ಡೋಣಮರಡಿ, ತಾ: ಮಾನವಿ, ಜಿ: ರಾಯಚೂರು** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು, ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984, ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

## 2. ದೂರಿನ ಸಂಕ್ಷಿಪ್ತ ಮಾಹಿತಿ :–

i) ದೂರುದಾರರು ತನ್ನ ದೂರಿನಲ್ಲಿ, ತನ್ನ ತಂದೆ ಹೆಸರಿನಲ್ಲಿ ದೊಣಮರಡಿ ಗ್ರಾಮದಲ್ಲಿ ಸರ್ವೇ ನಂ: 4 ರಲ್ಲಿ 1 ಎಕರೆ ಭೂಮಿಯಲ್ಲಿ 21 ಪ್ಲಾಟ್‌ಗಳನ್ನು ಮಾಡಿದ್ದು, ಅದರಲ್ಲಿ 8 ಪ್ಲಾಟ್‌ಗಳನ್ನು ಮಾರಾಟ ಮಾಡಿದ್ದು, ಮೇಲ್ಕಂಡ ಪ್ಲಾಟ್‌ಗಳ ಖಾತಾ ನಕಲು ಕೋರಿ ಎಲ್ಲಾ ದಾಖಲಾತಿಗಳೊಂದಿಗೆ ಮಲ್ಲದಗುಡ್ಡ ಗ್ರಾಮ ಪಂಚಾಯತಿಗೆ ಅರ್ಜಿ ಕೊಟ್ಟಿದ್ದು, ಸದರಿ ಅರ್ಜಿಗೆ ಸಂಬಂಧಪಟ್ಟ ತೆರಿಗೆ ಶುಲ್ಕವನ್ನು ಸಹ ಪಾವತಿಸಿರುತ್ತಾರೆ. ಎದುರುದಾರರು 21 ಖಾತೆ ನಕಲು ಮಾಡಿಕೊಡಲು ಒಟ್ಟು 50,000/– ರೂ.ಗಳ ಲಂಚದ ಬೇಡಿಕೆ ಇಟ್ಟಿರುತ್ತಾರೆ. ಎದುರುದಾರರು ಈಗಾಗಲೇ 8 ಪ್ಲಾಟ್‌ಗಳ ಖಾತಾ ನಕಲುಗಳನ್ನು ನೀಡಿ, ದೂರುದಾರರಿಂದ 25,000/– ರೂಗಳನ್ನು ಪಡೆದಿರುತ್ತಾರೆ. ಉಳಿದ 13 ಪ್ಲಾಟ್‌ಗಳ ಖಾತಾ ನಕಲು ನೀಡಲು ಎದುರುದಾರರು ಇನ್ನೂ

25,000/–ಗಳ ಲಂಚದ ಹಣವನ್ನು ನೀಡಲು ಒತ್ತಾಯಿಸಿದಲ್ಲದೇ, ಎದುರುದಾರರು, ದೂರುದಾರರು ಕೊಡುವ ಲಂಚದ ಹಣವನ್ನು ಅವರ ಗಂಡ ವಿಜಯಮಹಾಂತೇಶ @ ವಿಜಯಕುಮಾರ, ಮತ್ತು ಅವರ ತಮ್ಮ ಅಮರೇಶ ಬಿನ್ ಹನುಮಂತಪ್ಪ ಇವರುಗಳು ಪಡೆದುಕೊಳ್ಳುವಂತೆ ಪ್ರೇರೇಪಿಸಿರುತ್ತಿರುತ್ತಾರೆ. ಈ ಸಂಬಂಧವಾಗಿ ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದ ಪ್ರಯುಕ್ತ ದಿನಾಂಕ: 17–4–2018 ರಂದು ಪೊಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹ ದಳ, ರಾಯಚೂರು, ಇಲ್ಲಿಗೆ ಹಾಜರಾಗಿ ದೂರು ಕೊಟ್ಟಿದ್ದು, ಹಾಗೂ ದೂರಿನ ಜೊತೆ ಎದುರುದಾರರು ಲಂಚದ ಹಣ ಕೇಳಿದ ಬಗ್ಗೆ ಆಡಿಯೋ ಹಾಗೂ ಕಾಲ್ ರೆಕಾರ್ಡ್‌ರನ್ನು ಮಾಡಿದ ಸಿಡಿಯನ್ನು ಹಾಜರುಪಡಿಸಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಮೊ.ಸಂಖ್ಯೆ: 05/2018 ರಲ್ಲಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ಕಲಂ 7ರ ಅಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

ii). ದಿನಾಂಕ: 17–4–2018 ರಂದು ತನಿಖಾಧಿಕಾರಿಯು ಪಂಚರಾದ ವೀರಣ್ಣಗೌಡ ಪಂಚ–1, ಮಲ್ಲನಗೌಡ ಪಂಚ–2, ಇವರನ್ನು ಬರಮಾಡಿಕೊಂಡು ದೂರುದಾರರನ್ನು ಪರಿಚಯಿಸಿ, ದೂರಿನ ವಿಚಾರವನ್ನು ತಿಳಿಸಿ, ದೂರುದಾರರು ಎದುರುದಾರರಿಗೆ ಕೊಡಲು ತಂದಿದ್ದ ಲಂಚದ ಹಣ 25000/– ಗಳನ್ನು ಹಾಜರುಪಡಿಸಿದ್ದು, (ಡಿನಾಮಿನೇಷನ್ : 2000/– x 12, 500 x 2), ಸದರಿ ಲಂಚದ ಹಣವನ್ನು ಪಂಚರುಗಳು ಪರಿಶೀಲಿಸಿದ್ದು, ನೋಟಿನ ಮೌಲ್ಯ ಮತ್ತು ಸಂಖ್ಯೆಗಳನ್ನು ಪ್ರತ್ಯೇಕ ಹಾಳೆಯಲ್ಲಿ ದಾಖಲಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿ ಸೂಚನೆಯ ಮೇರೆಗೆ ಪಂಚ–1 ವೀರಣ್ಣಗೌಡ ರವರು ಪೊಲೀಸ್ ಸಿಬ್ಬಂದಿಯಿಂದ ಫಿನಾಪ್ತಲೀನ್ ಪೌಡರ್ ಲೇಪಿಸಿದ ನೋಟುಗಳನ್ನು ಎರಡೂ ಕೈಗಳಿಂದ ಎಣಿಸಿ, ದೂರುದಾರರ ಅಂಗಿಯ ಎದೆ ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿ ದೂರುದಾರರಿಗೆ ನಿಗದಿತ ಸೂಚನೆಯನ್ನು ಕೊಟ್ಟು, ಎದುರುದಾರರು ಲಂಚದ ಹಣವನ್ನು ಕೇಳಿ ಪಡೆದ ನಂತರ ದೂರುದಾರರು ತನ್ನ ತಲೆ ಕೂದಲುಗಳ ಮೇಲೆ ಕೈಯಾಡಿಸುವ ಮೂಲಕ ಸನ್ನೆ ಮಾಡಿ ಸೂಚನೆ ನೀಡಬೇಕೆಂದು ತಿಳಿಸಿರುತ್ತಾರೆ ಹಾಗೂ ಇವರ ಜೊತೆ ಮಲ್ಲನಗೌಡ ಪಂಚ–2 ಇವರು ಇದ್ದು, ಘಟನೆಯನ್ನು ಗಮನಿಸಬೇಕೆಂದು ಸೂಚಿಸಿರುತ್ತಾರೆ ಹಾಗೂ ತನಿಖಾಧಿಕಾರಿ ಒಂದು ಡಿಜಿಟಲ್ ವ್ಯಾಯ್ಸ್ ರೆಕಾರ್ಡ್‌ರ್ ನೀಡಿ ಅದನ್ನು ಉಪಯೋಗಿಸುವ ವಿಧಾನವನ್ನು ತಿಳಿಸಿರುತ್ತಾರೆ. ಈ ಸಂಬಂಧವಾಗಿ ಪಂಚರ ಸಮಕ್ಷಮ ಪ್ರಾಯೋಗಿಕ ಪಂಚನಾಮೆಯನ್ನು ದಿ: 17/4/2018ರಂದು ಬೆ: 11.30 ರಿಂದ ಮ: 1.45 ರವರೆ ಮಾಡಿರುತ್ತಾರೆ.

iii). ಅದೇ ದಿನ ಅಂದರೆ, ದಿನಾಂಕ: 17–4–2018 ರಂದು ದೂರುದಾರರು, ನೆರಳು ಸಾಕ್ಷಿಯೊಂದಿಗೆ ಎದುರುದಾರರ ಕಛೇರಿಗೆ ಬಂದಾಗ, ಎದುರುದಾರರು ದೂರುದಾರರನ್ನು ಕುರಿತು ನಿಮ್ಮ ಖಾತಾ ನಕಲುಗಳು ಮಸ್ಕಿಯಲ್ಲಿರುವ ನಮ್ಮ ಮನೆಯಲ್ಲಿದ್ದು, ಒಂದು ತಾಸು ಬಿಟ್ಟು ಮಸ್ಕಿಗೆ ಬನ್ನಿ ಎಂದು ಹೇಳಿರುತ್ತಾರೆ. ನಂತರ ದೂರುದಾರರು ಎದುರುದಾರರ ಸೂಚನೆ ಮೇರೆಗೆ ಮಸ್ಕಿಗೆ ಬಂದು ತನ್ನ ಮೊಬೈಲ್ ನಂ: 9972780292 ರಿಂದ ಎದುರುದಾರರ ಗಂಡ ವಿಜಯಕುಮಾರ ಇವರ ಮೊಬೈಲ್ ನಂ: 9110251680 ಗೆ ಕಾಲ್ ಮಾಡಿ ಮಸ್ಕಿಗೆ ಬಂದಿರುವುದಾಗಿ ತಿಳಿಸಿರುತ್ತಾರೆ.

ನಂತರ ಸಂಜೆ 6.22ರ ಸಮಯದಲ್ಲಿ ದೂರುದಾರರು ಎದುರುದಾರರ ಗಂಡ ವಿಜಯಕುಮಾರ್ ರವರಿಗೆ ಕಾಲ್ ಮಾಡಿದಾಗ, ಅವರು ತನ್ನ ಅಳಿಯನಾದ ಅಮರೇಶ (ಎದುರುದಾರರ ತಮ್ಮ) ಇವರ ಹಿರೋ ಮೋಟಾರ್ಸ್ ಶೋ ರೂಂ ಗೆ ಹೋಗಿ, ಅವನ ಹತ್ತಿರ ಖಾತ ನಕಲುಗಳು ಇವೆ ಕೊಡುತ್ತಾನೆ ಎಂದು ದೂರುದಾರರಿಗೆ ತಿಳಿಸುತ್ತಾರೆ. ಆನಂತರ ತನಿಖಾಧಿಕಾರಿಯ ಸೂಚನೆಯಂತೆ ದೂರುದಾರರು ಹಾಗೂ ನೆರಳು ಸಾಕ್ಷಿ ಹಿರೋ ಮೋಟಾರ್ಸ್ ಶೋ ರೂಂ ಗೆ ಹೋಗಿದ್ದು, ಎದುರುದಾರರ ಗಂಡ ವಿಜಯಕುಮಾರ್ ಹೇಳಿದಂತೆ, ಅವರ ಅಳಿಯನಾದ ಅಮರೇಶ ಇವರು 25,000/- ರೂ. ಲಂಚದ ಹಣವನ್ನು ಎದುರುದಾರರ ಪರವಾಗಿ ಪಡೆದಿರುತ್ತಾರೆ. ನಂತರ ದೂರುದಾರರು ತನಿಖಾಧಿಕಾರಿಗೆ ನಿಗದಿತ ಸೂಚನೆಯನ್ನು ಕೊಟ್ಟ ಬಳಿಕ, ತನಿಖಾಧಿಕಾರಿ ಸ್ಥಳಕ್ಕೆ ಬಂದಾಗ, ದೂರುದಾರರು ಲಂಚದ ಹಣ ಪಡೆದ ಅಮರೇಶರವರನ್ನು ತನಿಖಾಧಿಕಾರಿಗೆ ತೋರಿಸಿಕೊಟ್ಟಿರುತ್ತಾರೆ. ನಂತರ ತನಿಖಾಧಿಕಾರಿಯ ಸೂಚನೆ ಮೇರೆಗೆ, ಸಿಬ್ಬಂದಿ ಅಮರೇಶನ ಎರಡೂ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ತೊಳೆದಾಗ, ದ್ರಾವಣವು ಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ನಂತರ, ತನಿಖಾಧಿಕಾರಿ ಸೂಚನೆ ಮೇರೆಗೆ ಅಮರೇಶನು ದೂರುದಾರರಿಂದ ಪಡೆದಿದ್ದ ಲಂಚದ ಹಣ 25000/- ರೂ.ಗಳನ್ನು ಹಾಜರುಪಡಿಸಿರುತ್ತಾರೆ. ತನಿಖಾಧಿಕಾರಿ ಸೂಚನೆ ಮೇರೆಗೆ ಪಂಚರು ಹಣದ ಮೌಲ್ಯ ಮತ್ತು ನಂಬರುಗಳನ್ನು ಪರಿಶೀಲಿಸಿ, ಪ್ರಾಯೋಗಿಕ ಪಂಚನಾಮೆಯ ವೇಳೆಯಲ್ಲಿ ಬರೆದ ಪಟ್ಟಿಗೆ ತಾಳೆ ಮಾಡಿ ಖಾತ್ರಿಪಡಿಸಿಕೊಂಡಿರುತ್ತಾರೆ. ನಂತರ, ಲಂಚದ ಹಣವನ್ನು ತನಿಖಾಧಿಕಾರಿಯು ಅಮಾನತ್ತುಪಡಿಸಿಕೊಂಡಿರುತ್ತಾರೆ ಹಾಗೂ ಅಮರೇಶರವರ ಶರ್ಟ್‌ನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯು ಎದುರುದಾರರ ಗಂಡ ವಿಜಯಕುಮಾರ್ ಇವರನ್ನು ಶೋ ರೂಂ ಗೆ ಬರಮಾಡಿಕೊಂಡು ವಿಚಾರಣೆ ಮಾಡಿರುತ್ತಾರೆ. ದೂರುದಾರರಲ್ಲಿದ್ದ ವಾಯ್ಸ್ ರೆಕಾರ್ಡ್‌ನ್ನು ಪಡೆದು ಅದರಲ್ಲಿದ್ದ ಸಂಭಾಷಣೆಯನ್ನು ಲ್ಯಾಪ್‌ಟ್ಯಾಪ್ ವರ್ಗಾಯಿಸಿಕೊಂಡು, ನಂತರ ಸಿ.ಡಿ.ಗಳಿಗೆ ವರ್ಗಾಯಿಸಿ ಅವುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ತನಿಖೆ ವೇಳೆಯಲ್ಲಿ ಎದುರುದಾರರು ತಮ್ಮ ಮನೆಯಿಂದ ಪರಾರಿಯಾಗಿರುತ್ತಾರೆ. ನಂತರ ತನಿಖಾಧಿಕಾರಿ ಲಂಚದ ಹಣ ಪಡೆದ ಅಮರೇಶ್‌ನನ್ನು ರಕ್ಷಣಾ ಹೇಳಿಕೆ ನೀಡುವಂತೆ ಹೇಳಿದಾಗ, **"ಅವರು ತನ್ನ ಹೇಳಿಕೆಯಲ್ಲಿ ತಾನು ಅಂಗಡಿಯಲ್ಲಿ ಕುಳಿತುಕೊಂಡಿದ್ದಾಗ ಒಬ್ಬ ವ್ಯಕ್ತಿ ಬಂದು ತನ್ನಗೆ ರೂ.25,000/- ಗಳನ್ನು ಕೊಟ್ಟಿರುತ್ತಾನೆ. ಹಾಗೂ ಸದರಿ ಹಣವನ್ನು ತನ್ನ ಮಾವನವರಾದ ಶ್ರೀ ವಿಜಯಕುಮಾರ ಹೇಳಿದಂತೆ, ತಾನು ಹಣವನ್ನು ಪಡೆದುಕೊಂಡು, ತನಗೆ ಹಣ ಕೊಟ್ಟವರಿಗೆ 10 ಖಾತಾ ನಕಲುಗಳನ್ನು ನೀಡಿರುವುದಾಗಿ ಹೇಳಿರುತ್ತಾರೆ".** ನಂತರ, ತನಿಖಾಧಿಕಾರಿಯವರು ಎದುರುದಾರರ ಗಂಡ ಶ್ರೀ ವಿಜಯಕುಮಾರ ರವರನ್ನು ಸಮಜಾಯಿಷಿಕೆಯನ್ನು ನೀಡುವಂತೆ ಕೇಳಿದಾಗ ಶ್ರೀ ವಿಜಯಕುಮಾರ ರವರು ತನ್ನ ಸಮಜಾಯಿಷಿಕೆಯನ್ನು ಶ್ರೀ ಅಮರೇಶರವರ ಕಡೆಯಿಂದ ಬರೆಯಿಸಿ, ಸಹಿ ಮಾಡಿದ್ದು, **"ಅದರಲ್ಲಿ, ತಾನು ಶ್ರೀ ಅಮರೇಶನಿಗೆ ದಾಖಲೆಗಳನ್ನು ನೀಡಿರುವುದಾಗಿ, ಅವುಗಳನ್ನು ಡೊಣಮರಡಿಯವರಿಗೆ ಕೊಡಲು ತಿಳಿಸಿರುವುದಾಗಿ ಮತ್ತು ಅವರಿಂದ ರೂ.25,000/- ಗಳನ್ನು ತೆಗೆದುಕೊಂಡು ಇಟ್ಟುಕೊಳ್ಳಲು ಹೇಳಿರುವುದಾಗಿ..."** ಬರೆದುಕೊಟ್ಟಿರುತ್ತಾರೆ. ಈ ಸಂಬಂಧವಾಗಿ ತನಿಖಾಧಿಕಾರಿಯು ದಿ:

17/4/2018ರಂದು ಸ: 6.40 ಗಂಟೆಯಿಂದ ದಿ: 18-4-2018 ರಿಂದ 00.30 ರವರೆಗೆ ಹಣ ಜಪ್ತಿ ಪಂಚನಾಮೆಯನ್ನು ಮಾಡಿರುತ್ತಾರೆ.

iv). ಎದುರುದಾರರು ದಿನಾಂಕ: 18-04-2018ರಂದು ತನಿಖಾಧಿಕಾರಿಯವರಿಗೆ ಹೇಳಿಕೆಯನ್ನು ನೀಡಿದ್ದು, ಅದರಲ್ಲಿ ದೂರುದಾರರು ತನ್ನನ್ನು ಉದ್ದೇಶಪೂರ್ವಕವಾಗಿ ಪ್ರಕರಣದಲ್ಲಿ ಸಿಲುಕಿಸಬೇಕೆಂದು, ಪ್ರಕರಣ ದಾಖಲಾಗಿರುತ್ತದೆ. ಹಾಗೂ ತನ್ನ ಗಮನಕ್ಕೆ ಬರದೇ, ನಡೆದ ಪ್ರಕರಣವಾಗಿದೆಯೆಂದು ಬರೆದಿರುತ್ತಾರೆ. ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಹಾಗೂ ಎದುರುದಾರರನ್ನು ತನಿಖಾಧಿಕಾರಿ ದಿನಾಂಕ: 18-4-2018 ರಂದು ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ.

v). ತನಿಖಾಧಿಕಾರಿಯು, ಸಿಡಿಗಳಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ ಎದುರುದಾರರ ಹಾಗೂ ಅಮರೇಶ ಮತ್ತು ವಿಜಯಕುಮಾರ್ ರವರ ಮಾದರಿ ಧ್ವನಿಗೆ ಹೋಲಿಕೆಯ ಸಂಬಂಧವಾಗಿ ವರದಿಯನ್ನು ಕೋರಿ ವಿಧಿ ವಿಜ್ಞಾನ ಪ್ರಯೋಗಾಲಯದ ಕಳಿಸಿರುತ್ತಾರೆ. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೆ ಮಾಲುಗಳಲ್ಲಿ ಫಿನಾಪ್ತಿಲೀನ್ ಅಂಶ ಇರುವುದು ದೃಢಪಟ್ಟಿದೆ.

vi). ಎದುರುದಾರರಿಗೆ ದಿ: 13/09/2021 ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ / ವಿವರಣೆಯನ್ನು ಕೇಳಲಾಗಿದ್ದು, ಎದುರುದಾರರು ತನ್ನ ವಿವರಣೆಯನ್ನು ದಿ: 21/10/2021 ರಂದು ಸಲ್ಲಿಸಿರುತ್ತಾರೆ. ಸದರಿ ವಿವರಣೆಯನ್ನು ಪರಿಶೀಲಿಸಲಾಗಿ, ಎದುರುದಾರರು ತನ್ನ ವಿವರಣೆಯಲ್ಲಿ ದೂರುದಾರರಿಂದ ಯಾವುದೇ ಹಣದ ಬೇಡಿಕೆಯನ್ನು ಇಟ್ಟಿರುವುದಿಲ್ಲ. ತನ್ನ ಗಂಡ ಕುಷ್ಟಗಿ ತಾಲ್ಲೂಕಿನ ಪಟ್ಟಲಚಿಂತಿ ಗ್ರಾಮದಲ್ಲಿ ಜಮೀನು ಹೊಂದಿದ್ದು, ವ್ಯವಸಾಯ ಮಾಡಿಕೊಂಡಿರುತ್ತಾರೆ, ತನ್ನ ತಮ್ಮ ಅಮರೇಶ ಹಿರೋ ಹೊಂಡ ಶೋ ರೂಂ ಹೊಂದಿದ್ದು, ಅದನ್ನು ಈಗ ಮುಚ್ಚಲಾಗಿರುತ್ತದೆ. ದೂರುದಾರರು ತನ್ನ ವಿರುದ್ಧ ದುರುದ್ದೇಶದಿಂದ ಸುಳ್ಳು ದೂರು ದಾಖಲಿಸಿರುತ್ತಾರೆ. ಎದುರುದಾರರು ಪರಿವೀಕ್ಷಣಾ ಟಿಪ್ಪಣಿಯಲ್ಲಿ ನಮೂದಿಸಿರುವ ಎಲ್ಲಾ ಆಪಾದನೆಗಳ ಅಂಶಗಳನ್ನು ಅಲ್ಲಗಳೆದಿರುತ್ತಾರೆ. ದೂರುದಾರರ ಮಾತನ್ನು ನಂಬಿ, ಎ.ಸಿ.ಬಿ. ಅಧಿಕಾರಿಗಳು ತಾನು ಮನೆಯಲ್ಲಿದ್ದಾಗ ಬಂದು, ನಾನು ಅಮರೇಶ್ ಡೊಣಮರಡಿ ಇವರಿಂದ ನನ್ನ ತಮ್ಮನ ಮೂಲಕ ಲಂಚ ಸ್ವೀಕರಿಸಿದ್ದೇನೆಂದು ಒಪ್ಪಿಗೆ ಪತ್ರವನ್ನು ಬರೆದುಕೊಡುವಂತೆ ಒತ್ತಾಯಿಸಿ, ಹೆದರುಸಿರುತ್ತಾರೆ ಆದರೆ ನಾನು ಮನೆಯಲ್ಲಿಯೇ ಇದ್ದೆ, ಆದರೆ ತನಿಖಾಧಿಕಾರಿಯು ನಾನು ಸ್ಥಳದಿಂದ ಪರಾರಿಯಾಗಿದೇನೆಂದು ಸುಳ್ಳು ಕೇಸು ದಾಖಲಿಸಿರುತ್ತಾರೆ. ಸಾಕ್ಷ್ಯದಾರರ ಹೇಳಿಕೆಗಳನ್ನು ಎ.ಸಿ.ಬಿ ಅಧಿಕಾರಿಗಳೇ ಸೃಷ್ಟಿಮಾಡಿರುತ್ತಾರೆ. ದೂರುದಾರರಿಂದ ತಾನು ಯಾವುದೇ ಲಂಚದ ಹಣಕ್ಕೆ ಬೇಡಿಕೆ ಇಟ್ಟಿಲ್ಲ, ಹಾಗೂ ಪಡೆದಿಲ್ಲ, ತನ್ನ ವಿರುದ್ಧ ಈಗಾಗಲೇ ಮಾನ್ಯ 2ನೇ ಸತ್ರ ನ್ಯಾಯಾಲಯ, ರಾಯಚೂರು ಇಲ್ಲಿ ಪ್ರಕರಣ ವಿಚಾರಣೆಗೆ ಬಾಕಿ ಇರುತ್ತದೆ ಮತ್ತು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ರಾಯಚೂರು, ಇವರಲ್ಲಿ ಇದೇ

ವಿಚಾರವಾಗಿ, ವಿಚಾರಣೆ ನಡೆಯುತ್ತಿದೆ. ಆದ್ದರಿಂದ ತನ್ನ ವಿರುದ್ಧ ಶಿಸ್ತು ಕ್ರಮ ಕೈಬಿಡುವಂತೆ ಕೋರಿರುತ್ತಾರೆ. ಎದುರುದಾರರು ನೀಡಿರುವ ಸಮಜಾಯಿಷಿಕೆಯನ್ನು ಈ ಹಂತದಲ್ಲಿ ಪರಿಗಣಿಸಲು ಬರುವುದಿಲ್ಲ ಹಾಗೂ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ, ಹಾಗಾಗಿ ಇವರ ವಿರುದ್ಧ ವಿಚಾರಣೆ ಮಾಡದೆ ಇರಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ. ಸಾಕ್ಷಿದಾರರ ಹೇಳಿಕೆಗಳು ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳಿಂದ ಮೇಲ್ನೋಟಕ್ಕೆ ದುರ್ನಡತೆ ಕಂಡು ಬರುತ್ತದೆ.

3. ಕಡತದಲ್ಲಿರುವ ಸಂಗತಿಗಳು ಹಾಗೂ ದಾಖಲಾತಿಗಳಿಂದ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರಿಸದೆ, ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವತನೆ / ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

4. ಆದುದರಿಂದ, ಎದುರುದಾರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯವಳಿ 1966 ರ (ಪ್ರಸ್ತುತ ಕರ್ನಾಟಕ ನಾಗರೀಕ ಸೇವಾ (ನಡೆತೆ) 2021), ನಿಯಮ 3(1) (i) ರಿಂದ (iii)ರ ಉಲ್ಲಂಘನೆಗಾಗಿ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿಯ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದು ಕೋರಿದೆ.

5. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

20/1/22

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತರು-1
ಕರ್ನಾಟಕ ರಾಜ್ಯ, ಬೆಂಗಳೂರು